


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬನೂ ಮುಸ್ತಲಖ್ ದಂಡಯಾತ್ರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–08–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮುಸ್ತಲಖ್ ಯುದ್ಧದ ಪ್ರಸ್ತಾಪ ಕಳೆದ ಕೆಲವು ಖುತ್ಬಗಳಿಂದ ನಡೆಯುತ್ತಿತ್ತು. ಇದರ ಇನ್ನಷ್ಟು ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಬನೂ ಮುಸ್ತಲಖ್‌ನಿಂದ ಮರಳುವಾಗ ಹಝ್ರತ್ ಪೈಗಂಬರ್(ಸ) ನಖೀಅ್ ಎಂಬ ಪ್ರದೇಶವನ್ನು ದಾಟುವಾಗ ಅಲ್ಲಿ ಬಹಳ ವಿಶಾಲವಾದ ಸ್ಥಳ, ಹುಲ್ಲು ಮತ್ತು ಅನೇಕ ಕೊಳಗಳನ್ನು ಕಂಡರು. ಬೇಸಿಗೆಯಲ್ಲಿ ಆ ಕೊಳಗಳ ನೀರು ಕಡಿಮೆಯಾಗುತ್ತದೆ ಎಂದು ಅದರ ಕುರಿತು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಲಾಯಿತು. ಆ ಸ್ಥಳದಲ್ಲಿ ಬಾವಿಗಳನ್ನು ತೋಡಲು ಮತ್ತು ಆ ಸ್ಥಳವನ್ನು ಹುಲ್ಲುಗಾವಲು ಪ್ರದೇಶವನ್ನಾಗಿ ಮಾಡಲು ಹಝ್ರತ್ ಪೈಗಂಬರ್(ಸ) ಹಝ್ರತ್ ಹಾತಿಬ್ ಬಿನ್ ಅಬೀ ಬಲ್‌ತಅ(ರ)ರಿಗೆ ಆದೇಶ ನೀಡಿದರು ಮತ್ತು ಹಝ್ರತ್ ಬಿಲಾಲ್ ಬಿನ್ ಹಾರಿಸುಲ್ ಮುಝ್‌ನಿ(ರ)ರನ್ನು ಮೇಲ್ನೋಟಗಾರನನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್(ಸ) ಅವರೊಡನೆ ಹೀಗೆ ಹೇಳಿದರು: ಫಜ್ರಿನ ಸಮಯದಲ್ಲಿ ಒಬ್ಬ ವ್ಯಕ್ತಿಯನ್ನು ಒಂದು ಬೆಟ್ಟದ ಮೇಲೆ ನಿಲ್ಲಿಸಿ ಆತನ ಕರೆ ತಲುಪುವ ಜಾಗದ ತನಕ ಮುಸ್ಲಿಮರ ಜಿಹಾದಿನ ಒಂಟೆಗಳು ಮತ್ತು ಕುದುರೆಗಳಿಗಾಗಿ ಹುಲ್ಲುಗಾವಲನ್ನು ಮಾಡಬೇಕು. ದುರ್ಬಲ ಪುರುಷ, ಸ್ತ್ರೀ ಮತ್ತು ಬಡ ಜನರು ತಮ್ಮ ಆಡುಕುರಿಗಳನ್ನು ಈ ಹುಲ್ಲುಗಾವಲಿನಲ್ಲಿ ಮೇಯಿಸಲು ಕೂಡ ಹಝ್ರತ್ ಪೈಗಂಬರ್(ಸ) ಅನುಮತಿ ಕೊಟ್ಟರು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದ ತನಕ ಈ ಹುಲ್ಲುಗಾವಲು ಅದೇ ರೀತಿ ಇತ್ತು. ಅನಂತರ ಕುದುರೆಗಳ ಮತ್ತು ಒಂಟೆಗಳ ಸಂಖ್ಯೆ ವರ್ಧಿಸಿದ ಕಾರಣ ಜಾಗವನ್ನು ಬದಲಾಯಿಸಲಾಯಿತು.

ಸಹಾಬಿಯರು ಚುರುಕಾಗಿ ಮತ್ತು ಉತ್ಸಾಹದಿಂದ ಇರಲು ಹಝ್ರತ್ ಪೈಗಂಬರ್(ಸ) ಏರ್ಪಾಡು ಮಾಡುತ್ತಿದ್ದರು. ಧೈರ್ಯ, ಪರಾಕ್ರಮ, ಸತ್ಯವಿಶ್ವಾಸ ಮತ್ತು ಯುದ್ಧ ಕೌಶಲದಲ್ಲಿ ಸಹಾಬಿಯರು ಮೇಲುಗೈ ಸಾಧಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಅವರ ನಡುವೆ ಪದೇ ಪದೇ ಕ್ರೀಡಾ ಸ್ಪರ್ಧೆಗಳನ್ನು ಸಂಘಟಿಸುತ್ತಿದ್ದರು. ಹೀಗೆ ಬನೂ ಮುಸ್ತಲಖ್‌ನಿಂದ ಮರಳುವಾಗ ನಖೀಅ್ ಎಂಬ ಆ ಪ್ರದೇಶದಲ್ಲಿ ಹಝ್ರತ್ ಪೈಗಂಬರ್(ಸ) ಸಹಾಬಿಯರ ನಡುವೆ ಕುದುರೆಗಳ ಮತ್ತು ಒಂಟೆಗಳ ಓಟದ ಸ್ಪರ್ಧೆಯನ್ನು ನಡೆಸಿದರು. ಹಝ್ರತ್ ಪೈಗಂಬರ್(ಸ)ರ ಹೆಣ್ಣು ಒಂಟೆಯಾದ ಖಸ್‌ವ ಎಲ್ಲ ಒಂಟೆಗಳಿಗಿಂತ ಮುಂದೆಯಾಯಿತು. ಹಝ್ರತ್ ಪೈಗಂಬರ್(ಸ)ರ ಕುದುರೆಯಾದ ಝುರಬ್ ಕೂಡ ಎಲ್ಲ ಕುದುರೆಗಳಿಗಿಂತ ಮುಂದೆಯಾಯಿತು. ಇದೇ ಜಾಗದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಆಯಿಶ(ರ)ರೊಂದಿಗೆ ಓಟದ ಸ್ಪರ್ಧೆ ಕೂಡ ನಡೆಸಿದರು. ಈ ಪಂದ್ಯಾಟದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಆಯಿಶ(ರ)ರಿಗಿಂತ ಮುಂದೆಯಾದರು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಇದು ಮುಂಚೆ ಒಂದು ಬಾರಿ ನೀನು ನನಗಿಂತ ಮುಂದೆ ಆಗಿದ್ದಕ್ಕೆ ಇರುವ ಪ್ರತೀಕಾರವಾಗಿದೆ. ಈ ವಾಕ್ಯದಲ್ಲಿ ಹಝ್ರತ್ ಪೈಗಂಬರ್(ಸ) ಹಿಂದೆ ನಡೆದ ಒಂದು ಘಟನೆಯ ಕಡೆಗೆ ಸೂಚನೆ ನೀಡಿದರು. ಅದೇನೆಂದರೆ, ಒಮ್ಮೆ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರ ಮನೆಗೆ ಹೋದಾಗ ಪೈಗಂಬರ್(ಸ) ಹಝ್ರತ್ ಆಯಿಶ(ರ)ರ ಕೈಯಲ್ಲಿ ಯಾವುದೋ ಒಂದು ವಸ್ತುವನ್ನು ಕಂಡರು. ಅದನ್ನು ಹಝ್ರತ್ ಪೈಗಂಬರ್(ಸ) ಕೇಳಿದಾಗ ಹಝ್ರತ್ ಆಯಿಶ ಅದನ್ನು ಕೊಡದೇ ಓಡಲಾರಂಭಿಸಿದರು. ಹಝ್ರತ್ ಪೈಗಂಬರ್(ಸ) ಸಹ ಅವರನ್ನು ಹಿಂಬಾಲಿಸಿ ಓಡಿದರು. ಆದರೆ ಹಿಡಿಯಲಾಗಲಿಲ್ಲ ಮತ್ತು ಅವರು ಮುಂದಕ್ಕೆ ಹೋದರು. ಮನೆಯನ್ನು ಸಂತೋಷದಾಯಕವನ್ನಾಗಿ ಮಾಡಲು ಅವರು ಹೀಗೆ ಮಾಡುತ್ತಿದ್ದರು. ಪ್ರತಿಯೊಂದು ಕಾರ್ಯದಲ್ಲಿ ಹಝ್ರತ್ ಪೈಗಂಬರ್(ಸ) ನಮ್ಮ ಮುಂದೆ ಮಾದರಿಯನ್ನು ಸ್ಥಾಪಿಸಿದರು. ತಮ್ಮ ಪತ್ನಿಯರೊಡನೆ ಕಠಿಣವಾಗಿ ವರ್ತಿಸುವ ಜನರಿಗೆ ಇದರಲ್ಲಿ ಪಾಠವಿದೆ. ಇಂದಿನ ಜನರಿಗೂ ಇದು ಮಾದರಿಯಾಗಿದೆ. ಮಹಿಳೆಯರೊಡನೆ ಈ ರೀತಿ ಉತ್ತಮವಾಗಿ ವರ್ತಿಸಲು ಇಸ್ಲಾಮ್ ಕಲಿಸಿತು. ಅದರ ಮಾದರಿಯನ್ನು ಹಝ್ರತ್ ಪೈಗಂಬರ್(ಸ) ಸ್ಥಾಪಿಸಿದರು.

ಈ ಯಾತ್ರೆಯಲ್ಲಿ ಇಫ್‌ಕಿನ ಪ್ರಸ್ತಾಪ ಕೂಡ ಲಭಿಸುತ್ತದೆ. ಅದರ ವಿವರಣೆ ಹೀಗಿದೆ: ಬನೂ ಮುಸ್ತಲಖ್ ಯುದ್ಧದಿಂದ ಮರಳುವಾಗ ಕಪಟವಿಶ್ವಾಸಿಗಳ ಕಡೆಯಿಂದ ಮತ್ತೊಂದು ಪಿತೂರಿಯನ್ನು ಹುಟ್ಟು ಹಾಕಲಾಯಿತು. ಅದು ಉಮ್ಮುಲ್ ಮೂಅ್‌ಮಿನೀನ್ ಹಝ್ರತ್ ಆಯಿಶ(ರ)ರ ಮೇಲೆ ಸುಳ್ಳಾರೋಪದ ಘಟನೆಯಾಗಿತ್ತು.

ಸಹೀಹ್ ಬುಖಾರಿಯ ವರದಿಯ ಪ್ರಕಾರ ಹಝ್ರತ್ ಆಯಿಶ(ರ) ಇಫ್‌ಕಿನ ಘಟನೆಯನ್ನು ಹೀಗೆ ವಿವರಿಸುತ್ತಾರೆ: ಹಝ್ರತ್ ಪೈಗಂಬರ್(ಸ) ಯಾವುದಾದರೂ ಯಾತ್ರೆ ಹೋಗಲು ಉದ್ದೇಶಿಸುವಾಗ ತಮ್ಮ ಪರಿಶುದ್ಧ ಪತ್ನಿಯರ ನಡುವೆ ಚೀಟಿ ಎತ್ತುತ್ತಿದ್ದರು. ಅನಂತರ ಯಾರ ಹೆಸರು ಬರುತ್ತಿತ್ತೋ ಅವರನ್ನು ಹಝ್ರತ್ ಪೈಗಂಬರ್(ಸ) ತನ್ನ ಜೊತೆ ಕರೆದುಕೊಂಡು ಹೋಗುತ್ತಿದ್ದರು. ಹಝ್ರತ್ ಪೈಗಂಬರ್(ಸ) ಒಂದು ಯುದ್ಧಕ್ಕೆ ಹೋಗಲಿಕ್ಕಾಗಿ ನಮ್ಮ ನಡುವೆ ಚೀಟಿ ತೆಗೆದರು. ಚೀಟಿಯಲ್ಲಿ ನನ್ನ ಹೆಸರು ಬಂತು. ಪರ್ದಾದ ಆದೇಶ ಅವತೀರ್ಣಗೊಂಡಾಗಿತ್ತು. ನಾನು ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹೋದೆ. ಯಾತ್ರೆಯ ವೇಳೆ ನಾನು ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುತ್ತಿದ್ದೆ. ಜನರು ನನ್ನ ಪಲ್ಲಕ್ಕಿಯನ್ನು ಎತ್ತಿ ಒಂಟೆಯ ಮೇಲೆ ಇರಿಸುತ್ತಿದ್ದರು. ತಂಗುವ ಸ್ಥಳದಲ್ಲಿ ನನ್ನ ಪಲ್ಲಕ್ಕಿಯನ್ನು ಕೆಳಗೆ ಇರಿಸುತ್ತಿದ್ದರು. ಯುದ್ಧದ ನಂತರ ಮರಳುವಾಗ ನಾವು ಮದೀನದ ಸಮೀಪಕ್ಕೆ ತಲುಪಿದಾಗ ಒಂದು

ರಾತ್ರಿ ಹಝ್ರತ್ ಪೈಗಂಬರ್[ಸ] ಹೊರಡಲು ಆದೇಶ ನೀಡಿದರು. ನಾನು ಶೌಚ ಕಾರ್ಯಗಳಿಗಾಗಿ ಹೊರಗೆ ಹೋಗಿದ್ದೆ. ನಾನು ಮರಳಿ ನನ್ನ ಸವಾರಿಯ ಬಳಿಗೆ ಹೋಗುತ್ತಿರುವ ವೇಳೆ ನನ್ನ ರತ್ನದ ಹಾರ ಎಲ್ಲೋ ತುಂಡಾಗಿ ಬಿದ್ದು ಹೋಗಿರುವುದಾಗಿ ನನ್ನ ಎದೆಯನ್ನು ಮುಟ್ಟಿ ನೋಡಿದಾಗ ಗೊತ್ತಾಯಿತು. ಅದನ್ನು ಹುಡುಕಲು ನಾನು ಮರಳಿ ಹೋದೆ. ಆ ವೇಳೆ ನನ್ನ ಪಲ್ಲಕ್ಕಿಯನ್ನು ಎತ್ತುತ್ತಿದ್ದವರು ನನ್ನ ಪಲ್ಲಕ್ಕಿಯನ್ನು ಎತ್ತಿ ಒಂಟೆಯ ಮೇಲೆ ಇರಿಸಿದರು. ನಾನು ಪಲ್ಲಕ್ಕಿಯಲ್ಲಿ ಇದ್ದೇನೆ ಎಂದು ಭಾವಿಸಿಕೊಂಡು ಅವರು ಹೊರಟು ಬಿಟ್ಟರು. ನಾನು ನನ್ನ ಮುತ್ತಿನ ಹಾರವನ್ನು ಕಂಡು ಹಿಡಿದೆ ಮತ್ತು ನಾನು ತಂಗುದಾಣದ ಕಡೆಗೆ ಮರಳಿದಾಗ ಅಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಹೊರಟು ಹೋಗಿದ್ದರು. ನಾನು ಮೊದಲು ಕುಳಿತಿದ್ದ ಅದೇ ಸ್ಥಳಕ್ಕೆ ಹೋದೆ. ನನ್ನನ್ನು ಕಾಣದೇ ಇರುವಾಗ ಆ ಜನರು ಮರಳಿ ಬರುವರು ಎಂದು ನಾನು ಯೋಚಿಸಿದೆ. ಆ ವೇಳೆ ನನಗೆ ನಿದ್ದೆ ಬಂತು.

ಸೈನ್ಯದ ಹಿಂದೆ ಇದ್ದುಕೊಂಡು ಕೆಳಗೆ ಬಿದ್ದು ಬಿಟ್ಟುಹೋಗಿರುವ ವಸ್ತುಗಳನ್ನು ಒಟ್ಟು ಸೇರಿಸುವ ಡ್ಯೂಟಿ ಸಫ್‌ವಾನ್ ಬಿನ್ ಮುಅತ್ತಲ್[ರ]ರದ್ದು ಆಗಿತ್ತು. ಅವರು ಬೆಳಿಗ್ಗೆ ನಾನು ಇದ್ದ ಸ್ಥಳದ ಸಮೀಪಕ್ಕೆ ತಲುಪಿದಾಗ ಅವರು ನನ್ನನ್ನು ಗುರುತಿಸಿದರು. ಏಕೆಂದರೆ ಪರ್ದಾದ ಆದೇಶಕ್ಕೆ ಮುಂಚೆ ಅವರು ನನ್ನನ್ನು ನೋಡಿದ್ದರು. ಅವರು **ಇನ್ನಾ ಲಿಲ್ಲಾಹ್** ಎಂದು ಹೇಳಿದಾಗ ನಾನು ಎಚ್ಚರಗೊಂಡೆ. ನಾನು ನನ್ನ ಹೊದಿಕೆಯಿಂದ ನನ್ನ ಮುಖವನ್ನು ಮರೆಸಿದೆ. ಅಲ್ಲಾಹನಾಣೆ ನಾವು ಒಂದು ಮಾತನ್ನು ಕೂಡ ಹೇಳಲಿಲ್ಲ. ನಾನು ಅವರ ಒಂಟೆಯ ಮೇಲೆ ಸವಾರನಾದೆ. ನಾವು ಕಠಿಣವಾದ ಬಿಸಿಲಿನಲ್ಲಿ ಮಧ್ಯಾಹ್ನದ ವೇಳೆ, ಸೈನ್ಯ ತಂಗಿದ್ದ ಸ್ಥಳಕ್ಕೆ ತಲುಪಿದೆವು. ಹಝ್ರತ್ ಆಯಿಶ[ರ] ಹೇಳುತ್ತಾರೆ: ನಾಶವಾದವರು ನಾಶವಾದರು. ಮಿಥ್ಯಾರೋಪದ ಹಿರಿಯ ಭಾಗ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್‌ನ ಕಡೆಯಿಂದಾಗಿತ್ತು.

ಹಝ್ರತ್ ಆಯಿಶ[ರ] ಹೇಳುತ್ತಾರೆ: ನಾವು ಮದೀನಕ್ಕೆ ತಲುಪಿದಾಗ ನಾನು ರೋಗಿಯಾದೆ. ನನಗೆ ಈ ಸುಳ್ಳಾರೋಪದ ಬಗ್ಗೆ ಏನೂ ಗೊತ್ತಿರಲಿಲ್ಲ. ರೋಗಾವಸ್ಥೆಯಲ್ಲಿ ನನಗೆ ಅಸಮಾಧಾನ ಉಂಟುಮಾಡಿದ ಸಂಗತಿ ಏನೆಂದರೆ, ಹಝ್ರತ್ ಪೈಗಂಬರ್[ಸ] ಸಾಮಾನ್ಯವಾಗಿ ತೋರಿಸುತ್ತಿದ್ದ ವಾತ್ಸಲ್ಯ ಆ ವೇಳೆ ಕಂಡು ಬರುತ್ತಿರಲಿಲ್ಲ. ಹಝ್ರತ್ ಪೈಗಂಬರ್[ಸ] ನನ್ನ ಬಳಿಗೆ ಬರುತ್ತಿದ್ದರು ಮತ್ತು ಸಲಾಂ ಹೇಳುತ್ತಿದ್ದರು ಹಾಗೂ ಹೇಗಿದ್ದೀಯಾ ಎಂದು ಕೇಳುತ್ತಿದ್ದರು. ಅನಂತರ ಹೊರಟು ಹೋಗುತ್ತಿದ್ದರು. ಇಷ್ಟು ಮಾತ್ರ ಮಾಡುತ್ತಿದ್ದರು. ಈ ಸಂಗತಿ ನನ್ನನ್ನು ಅಸಮಾಧಾನಗೊಳಿಸುತ್ತಿತ್ತು.

ನಾನು ಒಂದು ದಿನ ಉಮ್ಮೇ ಮಸ್‌ತಹ್‌ರ ಜೊತೆಗೆ ಹೊರಗೆ ಹೋದಾಗ ನನಗೆ ಸುಳ್ಳಾರೋಪ ಹೊರಿಸಿದವರ ಬಗ್ಗೆ ಗೊತ್ತಾಯಿತು. ನಾನು ನನ್ನ ಮನೆಗೆ ಮರಳಿ ಬಂದಾಗ ಹಝ್ರತ್ ಪೈಗಂಬರ್[ಸ] ನನ್ನ ಬಳಿಗೆ ಬಂದರು. ನಾನು ಹೇಳಿದೆ: ನೀವು ನನಗೆ ಅನುಮತಿ ಕೊಡುವುದಾದರೆ ನಾನು ನನ್ನ ತಂದೆತಾಯಂದಿರ ಬಳಿಗೆ ಹೋಗುವೆ. ಹಝ್ರತ್ ಪೈಗಂಬರ್[ಸ] ನನಗೆ ಅನುಮತಿ ಕೊಟ್ಟರು ಮತ್ತು ನಾನು ನನ್ನ ಹೆತ್ತವರ ಮನೆಗೆ ಹೋದೆ. ನಾನು ನನ್ನ ತಾಯಿಯೊಡನೆ ಜನರು ಏನು ಮಾತನಾಡುತ್ತಿದ್ದಾರೆ? ಎಂದು ಕೇಳಿದೆ. ಧೈರ್ಯದಿಂದಿರು ಎಂದು ನನ್ನ ತಾಯಿ ಹೇಳಿದರು. ಅನಂತರ ಹಝ್ರತ್ ಅಬೂಬಕರ್[ರ] ನನ್ನ ಸ್ವರವನ್ನು ಕೇಳಿದಾಗ ಹೀಗೆ ಹೇಳಿದರು: ನನ್ನ ಪ್ರಿಯ ಪುತ್ರಿ, ನಾನು ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ. ನೀನು ನಿನ್ನ ಮನೆಗೆ ಮರಳಿ ಹೋಗು. ಆಗ ನಾನು ಮರಳಿ ಹೋದೆ. ಹಝ್ರತ್ ಆಯಿಶ[ರ] ಹೇಳುತ್ತಾರೆ: ನಾನು ರಾತ್ರಿ ಪೂರ್ತಿ ಅಳುತ್ತಾ ಇದ್ದೆ. ಬೆಳಗಾಗುವ ತನಕ. ನನ್ನೊಡನೆ ಇರುವ ಸಂಬಂಧವನ್ನು ವಿಚ್ಛೇಧಿಸುವುದರ ಕುರಿತು ಅಂದು ಹಝ್ರತ್ ಪೈಗಂಬರ್[ಸ] ಹಝ್ರತ್ ಅಲಿ ಬಿನ್ ಅಬೀ ತಾಲಿಬ್[ರ] ಮತ್ತು ಹಝ್ರತ್ ಉಸಾಮ ಬಿನ್ ಝೈದ್[ರ]ರೊಡನೆ ಸಲಹೆ ಕೇಳಿದರು. ಹಝ್ರತ್ ಉಸಾಮ[ರ] ಹೇಳಿದರು: ಹಝ್ರತ್ ಆಯಿಶ[ರ] ನಿಮ್ಮ ಪರಿಶುದ್ಧ ಪತ್ನಿಯಾಗಿರುವರು. ಅವರ ಬಗ್ಗೆ ಒಳಿತಲ್ಲದೇ ಬೇರೇನೂ ನಾವು ಅರಿಯೆವು. ಇದು ಸ್ಪಷ್ಟವಾದ ಸುಳ್ಳು ಮತ್ತು ನಿರಾಧಾರ ಆರೋಪವಾಗಿದೆ. ಹಝ್ರತ್ ಅಲಿ[ರ] ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ನಿಮಗೆ ಯಾವುದೇ ಕೊರತೆ ಉಂಟುಮಾಡಿಲ್ಲ. ಅವರಲ್ಲದೆಯೂ ಅನೇಕ ಮಹಿಳೆಯರು ಇದ್ದಾರೆ. ನೀವು ಸೇವಕಿಯೊಡನೆ ಕೇಳಿರಿ. ಅವಳು ಸತ್ಯವನ್ನು ಹೇಳುವಳು. ಹಝ್ರತ್ ಪೈಗಂಬರ್[ಸ] ಸೇವಕಿಯೊಡನೆ ಕೇಳಿದಾಗ ಅವಳು ಹೀಗೆ ಹೇಳಿದಳು: ಅಲ್ಲಾಹನಾಣೆ, ನನಗೆ ತಪ್ಪೆಂದು ಅನಿಸುವ ಯಾವುದೇ ಸಂಗತಿಯನ್ನು ನಾನು ಅವರಲ್ಲಿ ಎಂದಿಗೂ ಕಂಡಿಲ್ಲ.

ಅದೇ ದಿನ ಹಝ್ರತ್ ಪೈಗಂಬರ್[ಸ] ಭಾಷಣ ಪೀಠದಲ್ಲಿ ನಿಂತುಕೊಂಡು ಅಬ್ದುಲ್ಲಾಹ್ ಬಿನ್ ಉಬಯ್‌ನೊಂದಿಗೆ ಇರುವ ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು: ಎಲೈ ಮುಸ್ಲಿಮರ ಸಮೂಹವೇ, ನನಗೆ ನನ್ನ ಮನೆಯವರ ಕುರಿತು ದುಃಖವನ್ನು ಉಂಟುಮಾಡಲು ಕಾರಣವಾದ ವ್ಯಕ್ತಿಯಿಂದ ಯಾರು ನನ್ನನ್ನು ಸಂರಕ್ಷಿಸುವರು? ಅಲ್ಲಾಹನಾಣೆ, ನನ್ನ ಮನೆಯವರ ಕುರಿತು ಒಳಿತಲ್ಲದೇ ನನಗೆ ಬೇರೇನೂ ಗೊತ್ತಿಲ್ಲ. ಹಝ್ರತ್ ಸಅದ್ ಬಿನ್ ಮುಆಧ್[ರ] ಹೇಳಿದರು: ನಾನು ನಿಮ್ಮನ್ನು ರಕ್ಷಿಸುವೆನು. ಆ ವ್ಯಕ್ತಿ ನಮ್ಮ ಗೋತ್ರವಾದ ಔಸ್‌ನವನಾಗಿದ್ದರೆ ನಾನು ಆತನ ತಲೆಯನ್ನು ಕತ್ತರಿಸುವೆನು. ಆತನು ಖಝ್ರಜ್ ಗೋತ್ರದವನಾಗಿದ್ದರೆ ನಿಮ್ಮ ಆದೇಶದಂತೆ ಮಾಡಲು ನಾವು ತಯಾರಿದ್ದೇವೆ. ಖಝ್ರಜ್ ಗೋತ್ರದ ಸರದಾರ ಸಅದ್ ಬಿನ್ ಉಬಾದ[ರ] ಎದ್ದು ನಿಂತು ಸಅದ್ ಬಿನ್ ಮುಆಧ್[ರ]ರೊಡನೆ ಹೀಗೆ ಹೇಳಿದರು: ನೀವು ಸುಳ್ಳು ಹೇಳಿದ್ದೀರಿ. ಅಲ್ಲಾಹನಾಣೆ, ನೀವು ನಮ್ಮ ಯಾವುದೇ ವ್ಯಕ್ತಿಯನ್ನು ಕೊಲ್ಲಲು ಸಾಧ್ಯವಿಲ್ಲ. ಈ ಮಾತುಗಳಿಂದ ಔಸ್ ಮತ್ತು ಖಝ್ರಜಿನ ಕೆಲವು ವ್ಯಕ್ತಿಗಳಿಗೆ ಕೋಪಬಂತು ಮತ್ತು ಜಗಳವಾಗುವ ಸ್ಥಿತಿ ಉಂಟಾಯಿತು. ಆದರೆ ಹಝ್ರತ್ ಪೈಗಂಬರ್[ಸ] ಎಲ್ಲರನ್ನು ಮನವರಿಕೆ ಮಾಡಿಕೊಂಡು ಶಾಂತಗೊಳಿಸಿದರು ಮತ್ತು ಮೌನವಾಗಿ ಅಲ್ಲಿಂದ ಹೊರಟು ಹೋದರು.

ಹಝ್ರತ್ ಆಯಿಶ[ರ] ಹೇಳುತ್ತಾರೆ: ನನ್ನ ಕಣ್ಣೀರು ನಿಲ್ಲುತ್ತಿರಲಿಲ್ಲ. ನಿದ್ದೆ ಬರುತ್ತಿರಲಿಲ್ಲ. ಅದೇ ಸ್ಥಿತಿಯಲ್ಲಿ ಹಝ್ರತ್ ಪೈಗಂಬರ್[ಸ] ನನ್ನ ಬಳಿಗೆ ಬಂದರು. **ತಶಹ್ಹುದ್** ಪಠಿಸಿದ ನಂತರ ಹೀಗೆ ಹೇಳಿದರು: ಹೇ ಆಯಿಶ ನೋಡು, ನಿನ್ನ ಕುರಿತು ನನಗೆ ಇಂತಿಂತಹ ಮಾತುಗಳು ತಲುಪಿವೆ. ನೀನು ನಿರಪರಾಧಿ ಎಂದಾದರೆ ಅಲ್ಲಾಹನು ನಿನ್ನನ್ನು ಈ ಆರೋಪದಿಂದ ಮುಕ್ತಗೊಳಿಸುವನು ಎಂದು ನನಗೆ ನಿರೀಕ್ಷೆಯಿದೆ. ಆದರೆ ನಿನ್ನಿಂದ ಏನಾದರೂ ತಪ್ಪು ನಡೆದಿದ್ದರೆ ಅಲ್ಲಾಹನಲ್ಲಿ ಕ್ಷಮೆ ಯಾಚಿಸು. ಏಕೆಂದರೆ ದಾಸನು ಪಶ್ಚಾತ್ತಾಪ ಮಾಡುವಾಗ ಅಲ್ಲಾಹನು ಅವನ ಪಶ್ಚಾತ್ತಾಪವನ್ನು ಅಂಗೀಕರಿಸುತ್ತಾನೆ ಮತ್ತು ಅವನ ಮೇಲೆ ಕರುಣೆದೋರುತ್ತಾನೆ. ಹಝ್ರತ್ ಪೈಗಂಬರ್[ಸ]ರ ಮಾತಿಗೆ ಉತ್ತರ ನೀಡಿರಿ ಎಂದು ನಾನು ನನ್ನ

ಹೆತ್ತವರೊಡನೆ ಹೇಳಿದೆ. ನಾವೇನು ಉತ್ತರಿಸಬೇಕೆಂದು ನಮಗೆ ಗೊತ್ತಾಗುವುದಿಲ್ಲ ಎಂದು ಅವರಿಬ್ಬರೂ ಹೇಳಿದರು. ಆಗ ನಾನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದೆ: ನನಗೆ ನನ್ನ ವಿಷಯ ಯೂಸುಫರ ತಂದೆಯ ಹಾಗೆ ತೋರುತ್ತಿದೆ. **ಫಸಬ್‌ರುನ್ ಜಮೀಲ್. ವಲ್ಲಾಹುಲ್ ಮುಸ್‌ತಆನು ಅಲಾ ಮಾ ತಸಿಫೂನ್** ಎಂದು ಅವರು ಹೇಳಿದ್ದರು. ಎಂದರೆ, ಉತ್ತಮವಾದ ಸಹನೆಯಲ್ಲದೇ ನನಗೆ ಏನು ಮಾಡಲು ಸಾಧ್ಯ? ನಿಮ್ಮ ಹೇಳಿಕೆಯ ಕುರಿತು ಅಲ್ಲಾಹನೊಡನೆ ಮಾತ್ರ ನೆರವನ್ನು ಯಾಚಿಸಬಹುದಾಗಿದೆ. ಆದ್ದರಿಂದ ನನಗೂ ಸಹನೆಯೇ ಉತ್ತಮ. ಖಂಡಿತವಾಗಿಯೂ ಅಲ್ಲಾಹನು ನನ್ನನ್ನು ಈ ಆರೋಪಗಳಿಂದ ಬೇಗನೇ ಮುಕ್ತಗೊಳಿಸುವನು.

ಅನಂತರ ಅಲ್ಲಿಂದ ಎದ್ದೇಳುವುದಕ್ಕಿಂತ ಮುಂಚಿತವಾಗಿಯೇ ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯವಾಣಿ ಅವತೀರ್ಣವಾಗುವ ಸ್ಥಿತಿ ಉಂಟಾಯಿತು. ಅವರು ಆ ಸ್ಥಿತಿಯ ನಂತರ ಮುಗುಳ್ನಗುತ್ತಾ ಹೀಗೆ ಹೇಳಿದರು: ಹೇ ಆಯಿಶ, ನೀನು ನಿರ್ದೋಷಿಯೆಂದು ಅಲ್ಲಾಹನು ತಿಳಿಸಿರುವನು.

ಬಡತನದ ಕಾರಣದಿಂದ ಮಸ್‌ತಹ್ ಬಿನ್ ಅಸಾಸ ಎಂಬವರಿಗೆ ಹಝ್ರತ್ ಅಬೂಬಕರ್(ರ) ಸಹಾಯ ಮಾಡುತ್ತಿದ್ದರು. ಆದರೆ ನಾನು ನಿರ್ದೋಷಿಯೆಂದು ಸ್ಪಷ್ಟಗೊಳಿಸಲಾದಾಗ ಇನ್ನು ಮುಂದೆ ಆತನಿಗೆ ಸಹಾಯ ಮಾಡುವುದಿಲ್ಲವೆಂದು ಅವರು ಅಲ್ಲಾಹನ ಹೆಸರಲ್ಲಿ ಪ್ರತಿಜ್ಞೆ ಮಾಡಿದರು. ಆದರೆ ಹೀಗೆ ಮಾಡುವುದು ಸರಿಯಲ್ಲವೆಂದು ಅಲ್ಲಾಹನು ದಿವ್ಯವಾಣಿ ಅವತೀರ್ಣಗೊಳಿಸಿದನು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಅಲ್ಲಾಹನು ನನ್ನ ಪಾಪಗಳನ್ನು ಮರೆಮಾಚಲಿ ಎಂದು ನಾನು ಇಚ್ಛಿಸುತ್ತೇನೆ. ಇನ್ನು ಮುಂದೆ ಎಂದಿಗೂ ಮಸ್‌ತಹ್‌ನಿಗೆ ಆಹಾರಸಾಮಗ್ರಿಗಳನ್ನು ಕೊಡುವುದನ್ನು ನಾನು ನಿಲ್ಲಿಸಲಾರೆ ಎಂದು ಅವರು ಪ್ರತಿಜ್ಞೆ ಮಾಡಿದರು.

(ಖುತ್ಬದ ಕೊನೆಗೆ ಹುಝೂರ್ ಹೇಳಿದರು:) ಇಂದು ಪುನಃ ನಾನು ದುಆದ ಬಗ್ಗೆ ನೆನಪಿಸಲು ಬಯಸುತ್ತೇನೆ. ಬಾಂಗ್ಲಾದೇಶದ ಅಹ್ಮದಿಯರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರ ಸ್ಥಿತಿಗತಿಗಳನ್ನು ಬೇಗನೇ ಉತ್ತಮಗೊಳಿಸಲಿ. ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಸ್ಥಿತಿಗಳನ್ನು ಸಹ ಉತ್ತಮಗೊಳಿಸಲಿ. ಪೆಲಸ್ತೀನಿನ ಪೀಡಿತರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಸ್ಥಿತಿಯ ಮೇಲೂ ಕೃಪೆದೋರಲಿ. ಮುಸ್ಲಿಂ ದೇಶಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ನೇತಾರರಿಗೆ ಬುದ್ಧಿ ನೀಡಲಿ ಮತ್ತು ಅವರು ಪ್ರಜೆಗಳ ಹಕ್ಕನ್ನು ಈಡೇರಿಸುವವರಾಗಲಿ, ಅವರು ದೌರ್ಜನ್ಯ ಮಾಡುವವರಾಗದಿರಲಿ. ಅವರ ದೌರ್ಜನ್ಯದ ಕಾರಣದಿಂದಲೇ ಶತ್ರುಗಳಿಗೂ ಮುಸ್ಲಿಮರ ಮೇಲೆ ದೌರ್ಜನ್ಯ ಮಾಡಲು ಧೈರ್ಯ ಉಂಟಾಗುತ್ತಿದೆ. ಏಕೆಂದರೆ ಮುಸ್ಲಿಮರು ಸ್ವತಃ ಪರಸ್ಪರರ ಹಕ್ಕುಗಳನ್ನು ಈಡೇರಿಸದೇ ಇರುವಾಗ ನಮ್ಮಿಂದ ಹಕ್ಕನ್ನು ಅವಶ್ಯಪಡಲು ಸಾಧ್ಯವಿಲ್ಲವೆಂದು ಅವರಿಗೆ ಗೊತ್ತಿದೆ. ಅಲ್ಲಾಹನು ಮುಸ್ಲಿಮ್ ಸಮುದಾಯದ ಮೇಲೆ ಕರುಣೆದೋರಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)
At, ***'Masjid Mubarak',*** *Islamabad, Tilford,* U.K. On 16-08-2024
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* Basheer K.P. Manjeshwar
***Published By**:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon